# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕಪತ್ರ ಸ್ಥಾಯಿ ಸಮಿತಿಯ ದಿನಾಂಕ:24–12–2011ರಂದು ನಡೆದ ಸಭೆಯ ನಡವಳಿಗಳು:–

| ಹಾಜರಿದ್ದ ಶ್ರೀಯುತರ ಸದಸ್ಯರ ಹೆಸರು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀ.ಎ.ಎಲ್.ಶಿವಕುಮಾರ್ | ಅಧ್ಯಕ್ಷರು | ಮುಖ್ಯ ಲೆಕ್ಕ ಪರಿಶೋಧಕರು |
| ಶ್ರೀಮತಿ ಎಲ್.ಜೆ.ಜಯರತ್ನ | ಸದಸ್ಯರು | ಎಲ್ಲಾ ವಲಯದ ಸಹಾಯಕ ನಿಯಂತ್ರಕರು(ಹಣಕಾಸು) |
| ಶ್ರೀ.ರಾಧಾಕೃಷ್ಣ | ಸದಸ್ಯರು | |
| ಶ್ರೀ.ಕೆ.ಚಂದ್ರಶೇಖರ್ | ಸದಸ್ಯರು | |
| ಡಾ:ಶಿವಪ್ರಸಾದ್ | ಸದಸ್ಯರು | |
| ಶ್ರೀ.ಆನಂದ್ | ಸದಸ್ಯರು | |

ಅಧ್ಯಕ್ಷರು ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ, 1964–65 ರಿಂದ ಪಾಲಿಕೆಯಲ್ಲಿ ಆಡಿಟ್ ವರದಿಗೆ ತೀರುವಳಿಯಾಗದೇ ಉಳಿದಿದ್ದು, ಮೊದಲ ಹಂತದಲ್ಲಿ 1995 ರಿಂದ 15 ವರ್ಷ ವರದಿಗೆ ಕ್ರಮಕೈಗೊಳ್ಳಲು ಈಗಾಗಾಲೇ ಸಮಿತಿಯ ವತಿಯಿಂದ ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದರು, ಸಹ ಇದುವರೆಗೂ ನೋಡೆಲ್ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸಿರುವುದಿಲ್ಲ ಈ ಕಾರ್ಯದಲ್ಲಿ ಜರೂರು ಕ್ರಮವನ್ನು ನೋಡೆಲ್ ಅಧಿಕಾರಿಗಳು ಕೈಗೊಳ್ಳಬೇಕಾಗಿರುವುದರಿಂದ ಇತ್ತೀಚಿನ 2007–08 ಮತ್ತು 2008–09ನೇ ಸಾಲಿನ ಆಡಿಟ್ ವರದಿಗೆ 20/1/2012ರ ಒಳಗೆ ಮಾಹಿತಿ ಒದಗಿಸಬೇಕು ಇದರ ಜೊತೆಗೆ 15 ವರ್ಷಗಳ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ಹೆಸರನ್ನು ಕೂಡಲೇ ಒದಗಿಸುವಂತೆ ನೋಡೆಲ್ ಆದಿಕಾರಿಗಳಿಗೆ ಸೂಚಿಸಿದರು.

ಮುಖ್ಯ ಲೆಕ್ಕಪರಿಶೋಧಕರು ಮಾತನಾಡಿ ಮಾನ್ಯ ಅಧ್ಯಕ್ಷರು ಆದೇಶಿಸದಂತೆ 15 ವರ್ಷದ ವರದಿಗೆ ತೀರುವಳಿಯ ಪಡೆಯದೆ ಇರುವ ಅಧಿಕಾರಿಗಳ ಹೆಸರುಗಳನ್ನು ಪಟ್ಟಿ ಮಾಡಿ ಕ್ರಮಕೈಗೊಳ್ಳಲು ಅದ್ಯಕ್ಷರು ಸೂಚಿಸಿದ ರೀತಿ 2 ವರ್ಷದ ವರದಿಗೆ ಒಂದು ತಿಂಗಳ ಒಳಗಾಗಿ ಕ್ರಮಕೈಗೊಳ್ಳಲು ಎಲ್ಲಾ ನೋಡೆಲ್ ಆದಿಕಾರಿಗಳಿಗೆ ಸೂಚಿಸಿದರು. ಉಪ ನಿಯಂತ್ರಕರು(ಹಣಕಾಸು)ರವರು ಮಾತನಾಡಿ 2 ವರ್ಷದ ಎಲ್ಲಾ ಕಛೇರಿಯ ಅಧಿಕಾರಿಗಳ ಪಟ್ಟಿಯನ್ನು ಸಿದ್ದ ಮಾಡಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳ ಮಾಹಿತಿಯನ್ನು ಒದಗಿಸಲಾಗುವುದೆಂದರು, ಈ ಕುರಿತು ಬ್ಯಾಟರಾರಯನಪುರ ಸಹಾಯಕ ನಿಯಂತ್ರಕರು (ಹಣಕಾಸು)ರವರು ಮಾತನಾಡಿ ವಲಯದ ವ್ಯಾಪ್ತಿಯಲ್ಲಿ ಈಗಾಗಲೇ ದಿನಾಂಕ:23/10/2011 ಮತ್ತು 15/11/2011ರಂದು ಸಭೆ ನಡೆಸಿ ಆಡಿಟ್ ಆಕ್ಷೇಪಣೆ ಮತ್ತು ವಸೂಲಾತಿಗೆ ಕೈಗೊಂಡಿರುವ ಕಡತಗಳನ್ನು ಕೂಡಲೇ ಒದಗಿಸಲಾಗುವುದೆಂದರು.

ಅಧ್ಯಕ್ಷರು ಮಾತನಾಡಿ 1995 ರಿಂದ 2008ರವರೆಗೆ ಕೆಲವು ಕಚೇರಿಗಳ ಆಡಿಟ್ ವರದಿಯನ್ನು ಪರಿಶೀಲಿಸಿದಾಗ ಸಾಕಷ್ಟು ಆಕ್ಷೇಪಣೆಗಳು ಮತ್ತು ವಸೂಲಾತಿಗಳು ಮಾಡಬೇಕಾಗಿದ್ದು, ಈ ಬಗ್ಗೆ ಪರಿಶೀಲಿಸಿದಾಗ ಕೆಲವು ಅಧಿಕಾರಿ/ಸಿಬ್ಬಂದಿಗಳು ವರ್ಗವಾಗಿದ್ದು, ಕೆಲವರು ನಿವೃತ್ತಿಯಾಗಿದ್ದು ಇನ್ನೂ ಕೆಲವರು ನಿಯೋಜನೆ ಮೇಲೆ ಬಂದು ವಾಪಸ್ಸು ಹೋಗಿರುವುದರಿಂದ ಸರಿಯಾದ ಮಾಹಿತಿಯನ್ನು ಒದಗಿಸಲು ವಿಫಲವಾಗಿರುವುದೇ ಅಲ್ಲದೇ ಅದಿಕಾರಿಗಳು ತಮ್ಮ ಅಧೀನ ಸಿಬ್ಬಂದಿಗಳ ಮೇಲೆ ನಿಯಂತ್ರಣ ಕಳೆದುಕೊಂಡಿರುವುದು ಕಂಡುಬಂದಿರುವುದರಿಂದ, ಈ ಕೆಳಕಂಡ ಕಚೇರಿಗಳಲ್ಲಿ ಆಕ್ಷೆಪಣೆ ಮತ್ತು ವಸೂಲಾತಿಗಳ ಬಗ್ಗೆ ಹೆಚ್ಚಿನ ಗಮನಹರಿಸಬೇಕೆಂದು ನೋಡೆಲ್ ಅಧಿಕಾರಿಗಳಿಗೆ ಸೂಚಿಸಿದರು.

| ಕ್ರಮ. | ಕಚೇರಿ | ವರ್ಷ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 1 | ಸಿ.ಎ.ಓ. | 1995 ರಿಂದ 2008 | 178594127–00 | 14185963–00 |
| 2 | ಇ.ಇ.(ಶಾಂತಿನಗರ) | 1995 ರಿಂದ 2008 | 39799028–00 | 5502165–00 |
| 3 | ಇ.ಇ.(ಶಾಂತಿನಗರ) | 1995 ರಿಂದ 2008 | 156523018–00 | 8278440–00 |
| 4 | ಇ.ಇ.(ಶಾಂತಿನಗರ–2) | 2006–7–2007–8 | 32889718–00 | 358187–00 |
| 5 | ಇ.ಇ.(ಜಯಮಹಲ್) | 1995 ರಿಂದ 2008 | 208835133–00 | 11223984–00 |
| 6 | ಇ.ಇ.(ವಿದ್ಯುತ್ ಪೂರ್ವ) | 1995 ರಿಂದ 2008 | 115644836–00 | 8767985–00 |
| 7 | ಇ.ಇ.( ಪೂರ್ವ) | 1995 ರಿಂದ 2008 | 31075067–00 | 262205–00 |
| 8 | ಇ.ಇ.(ಎಂಪಿಎಡಿ ಪೂರ್ವ) | 2007–08 | 1566455–00 | 553867–00 |
| 9 | ಇ.ಇ.(ವಿದ್ಯುತ್ ಕೇಂದ್ರ) | 1996–97 | 155470–00 | 5497–00 |
| 10 | ಇಇ(ಮಹಾಲಕ್ಷ್ಮೀಲೇಔಟ್) | 1995 ರಿಂದ 2008 | 264524435–00 | 6611294–00 |
| 11 | ಇಇ(ಬಸವನಗುಡಿ–1) | 1995 ರಿಂದ 2007 | 118923628–00 | 6322989–00 |
| 12 | ಇಇ(ಚಂದ್ರಾಲೇಔಟ್) | 2003 ರಿಂದ 2008 | 79978700–00 | 2052159–00 |
| 13 | ಇಇ(ಭಿನ್ನಿಪೇಟೆ) | 2003 ರಿಂದ 2008 | 338268956–00 | 3944813–00 |
| 14 | ಇಇ(ಬಸವನಗುಡಿ–2) | 2006 ರಿಂದ 2008 | 26450080–00 | 270293–00 |
| 15 | ಇಇ(ದಕ್ಷಿಣ) | 1995 ರಿಂದ 97 | 34533560–00 | 720229–00 |
| 16 | ಇಇ(ವಿದ್ಯುತ್ ದಕ್ಷಿಣ) | 1995 ರಿಂದ 2007 | 139494251–00 | 4487329–00 |
| 17 | ಇಇ(ಎಂ.ಪಿ.ಇ.ಡಿ. ಪಶ್ಚಿಮ) | 2007–08 | 5908153–00 | 169647–00 |
| 18 | ಇಇ(ರಾಜಾಜಿನಗರ) | 1995 ರಿಂದ 2007 | 221129473–00 | 7045529–00 |
| 19 | ಇಇ(ಶಿವಾಜಿನಗರ) | 1996–97 | | |
| 20 | ಇಇ(ಮಲ್ಲೇಶ್ವರ) | 1995 ರಿಂದ 2007 | 219715740–00 | 6359920–00 |
| 21 | ಇಇ.(ವಿದ್ಯುತ್ ಪಶ್ಚಿಮ) | 1995 ರಿಂದ 2007 | 144439382–00 | 3434634–00 |
| 22 | ಇಇ(ಚಾಮರಾಜಪೇಟೆ) | 1995 ರಿಂದ 2007 | 338732743–00 | 10385905–00 |
| 23 | ಇಇ(ಉತ್ತರ) | 1995 ರಿಂದ 2007 | 28980747–00 | 397168–00 |
| 24 | ಇಇ(ಗಾಂಧಿನಗರ) | 1995 ರಿಂದ 2007 | 349297531–00 | 6941521–00 |
| 25 | ಇಇ(ಬೊಮ್ಮನಹಳ್ಳಿ) | 1997 ರಿಂದ 2008 | 17390893–00 | 799378–00 |
| 26 | ಇಇ(ಜಯನಗರ) | 1995 ರಿಂದ 2007 | 280245855–00 | 8356377–00 |
| | ಒಟ್ಟು ಮೊತ್ತ ರೂ | | 3669104441–00 | 117437478–00 |

ಅಧ್ಯಕ್ಷರು ಮಾತನಾಡಿ ಹೊಸ ವಲಯಗಳಲ್ಲಿ ಇರುವುದೇ 2 ವರ್ಷದ ಆಡಿಟ್ ಆಕ್ಷೇಪಣೆ ಈ ವರಿದಿಗೆ ಇದುವರೆವಿಗೂ ಯಾವುದೇ ಕ್ರಮಕೈಗೊಳ್ಳದೇ ಇರುವುದು ಕಂಡುಬಂದಿರುವುದರಿಮದ ಕೂಡಲೇ 2 ವರ್ಷದ ವರದಿಗೆ ದಿನಾಂಕ:20/01/2012ರ ಒಳಗೆ ಕ್ರಮಕೈಗೊಳ್ಳಬೇಕು ಹಾಗೆಯೇ 1995 ರಿಂದ ಇದುವರೆಗೆ ಆಡಿಟ್ ವರದಿಗೆ ಕಂಡಿಕೆವಾರು ಉತ್ತರವನ್ನು ಒದಗಿಸದೇ ಇರುವ ಅಧಿಕಾರಿಗಳ ಮಾಹಿತಿಯನ್ನು ಕೂಡಲೇ ಒದಗಿಸಲು ಎಲ್ಲಾ ನೋಡೆಲ್ ಅಧಿಕಾರಿಗಳಿಗೆ ಸೂಚಿಸುತ್ತಾ, ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

ನಿರ್ಣಯ:– ಮೇಲ್ಕಂಡ ವಿಷಯ 4 ರಿಂದ 30ರವರೆಗೆ ವಿಷಯಗಳ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಕ್ರಮ ಜರುಗಿಸಲು ತೀರ್ಮಾನಿಸಲಾಯಿತು.

1)1995ರಿಂದ ಇಲ್ಲಿಯವರೆಗಿನ ಲೆಕ್ಕ ಪರಿಸೋಧನಾ ವರದಿಯಲ್ಲಿ ತಿಳಿಸಿರುವ ಅಕ್ಷೇಪಣೆಗಳಿಗೆ ವರದಿಯನ್ನು ಸಲ್ಲಿಸಿದೆ ಇರುವುದರಿಂದ ಸಂಬಂಧಪಟ್ಟ ಅದಿಕಾರಿ ಮತ್ತು ಸಿಬ್ಬಂದಿ ವಿರುದ್ದ ಸಿ.ಸಿ.ಎ ನಿಯಮಾವಳಿಯ ರೀತ್ಯಾ ಶಿಸ್ತು ಕ್ರಮ ಜರುಗಿಸುವುದು.

2)ಲೆಕ್ಕಪರಿಶೋಧನೆಗೆ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸದೇ ಮತ್ತು ನಿಯಮ ಬಾಹಿರವಾಗಿ ಪಾವತಿಸಿರುವ ಮೊತ್ತಗಳು ಆಕ್ಷೇಪಣೆಯಲ್ಲಿ ಇದ್ದರು ಸಹ ಇಲ್ಲಿಯವರೆಗೂ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮತ್ತು ಸೂಕ್ತ ಮಾಹಿತಿಗಳನ್ನು ನೀಡದೇ ಇರುವುದನ್ನು ಗಮನಿಸಿದಾಗ ಉದ್ದೇಶ ಪೂರ್ವಕವಾಗಿ ದಾಖಲೆಗಳನ್ನು ನಾಶಪಡಿಸಲಾಗಿದೆ ಎಂದು ತೀರ್ಮಾನಿಸಿ ಇಂತಹ ಪ್ರಕರಣಗಳಿಗೆ ದಾಖಲಾತಿಗಳು ಕಾಣೆಯಾಗಿರುವ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ದ ಕ್ರಮ ಜರುಗಿಸಲು ಬಿ.ಎಂ.ಟಿ.ಎಫ್.ಠಾಣೆಯಲ್ಲಿ ದೂರು ದಾಖಲು ಮಾಡುವುದು.

3)ಲೆಕ್ಕಪರಿಶೋಧನಾ ವರದಿಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತಗಳನ್ನು ಕಡ್ಡಾಯವಾಗಿ ವಸೂಲಾತಿ ಮಾಡಬೇಕಾಗಿದ್ದು, ಈ ಬಗ್ಗೆ ಕ್ರಮವಹಿಸದೇ ಇರುವುದರಿಂದ ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟು ಮಾಡಿರುವುದರಿಂದ, ಈ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿ ಮತ್ತು ನೌಕರರ ಮಾಸಿಕ ವೇತನದಲ್ಲಿ ಕಟಾವು ಮಾಡಲು ಹಾಗು ನಿವೃತ್ತಿ ಹೊಂದಿರುವ ಅಧಿಕಾರಿ ಮತ್ತು ನೌಕರರ ನಿವೃತ್ತಿ ವೇತನದಲ್ಲಿ ಕಟಾವು ಮಾಡಲು ಅಥವಾ ವೈಯಕ್ತಿಕ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ವಸೂಲಿ ಮಾಡಲು ಕ್ರಮ ಜರುಗಿಸುವುದು.

4)ಪಾಲಿಕೆಯಲ್ಲಿ ಕೆ.ಸಿ.ಎಸ್.ಆರ್, ಕೆ.ಎಂ.ಸಿ., ಕೆ.ಟಿ.ಸಿ., ಎಂ.ಸಿ.ಎ., ಹಾಗು ಬಜೆಟ್ ಮ್ಯಾನುಯಲ್ ಕೆ.ಪಿ.ಡಬ್ಲ್ಯೂ.ಡಿ. ‘‘ಎ’’ ಕೋಡ್ ಮತ್ತು ‘‘ಡಿ’’ ಕೋಡ್ ನಿಯಮಾವಳಿಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದು, ಈ ನಿಯಮಗಳನ್ನು ಸರ್ಕಾರದಲ್ಲಿ ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿರುವಂತೆ ಇಲ್ಲಿಯೂ ಕಾರ್ಯ ನಿರ್ವಹಿಸಲು ಸೂಕ್ತ ಬದಲಾವಣೆಯೊಂದಿಗೆ ಸುತ್ತೋಲೆ ಹೊರಡಿಸಿ ನಿಯಮ ಉಲ್ಲಂಘಿಸುವ ಅಧಿಕಾರಿ/ಸಿಬ್ಬಂದಿಗಳ ಮೇಲ ಶಿಸ್ತಿನ ಕ್ರಮ ಜರುಗಿಸುವುದು.

5)ಪಾಲಿಕೆಯು ಬೃಹದಾಕಾರವಾಗಿ ಬೆಳೆದಿದ್ದು ಇಲಾಖೆಗಳು ಹೆಚ್ಚಿ ಅಧಿಕಾರಿ ಸಿಬ್ಬಂದಿಗಳ ಸಂಖ್ಯೆಯು ಸಹ ಹೆಚ್ಚಾಗಿರುವುದರ ಜೊತೆಗೆ ನಿಯೋಜನೆ ಮೇಲೆ ಬರುವ ಅಧಿಕಾರಿಗಳು ತಮಗಿಷ್ಟ ಬಂದ ಹಾಗೆ ಅಧಿಕಾರ ಪ್ರತ್ಯಾಯೋಜನೆ ಮಾಡಿಕೊಂಡು ಕೆಲಸ ನಿರ್ವಹಿಸುತ್ತಿದ್ದು ಇಂತಹವುಗಳ ಮೇಲೆ ಆಯುಕ್ತರು

ನಿಗಾವಹಿಸಲು ಕಷ್ಟಸಾಧ್ಯವಾಗಿರುತ್ತದೆ, ಅಲ್ಲದೆ ಸಮಿತಿಯ ವತಿಯಿಂದ ತಪಾಸಣೆ ಕೈಗೊಂಡಾಗಲೂ ಸಹ ಯಾವ ಅಧಿಕಾರಿ/ಸಿಬ್ಬಂದಿಗಳಿಗೆ ಸೂಕ್ತವಾಗಿ ಜವಾಬ್ದಾರಿ ನಿಗದಿಯಾಗಿಲ್ಲದಿರುವುದು ಕಂಡುಬಂದಿದೆ, ಆದ್ದರಿಂದ ಪಾಲಿಕೆಯಲ್ಲಿ ಎಲ್ಲಾ ಇಲಾಖೆಗಳನ್ನೊಳಗೊಂಡ ಅಧಿಕಾರಿ/ಸಿಬ್ಬಂದಿಗಳಿಗೆ ಅಕೌಂಟಬಿಲಿಟಿ, ರೆಸ್ಪಾನ್ಸಿಬಿಲಿಟಿ, ಆನ್ಸರಬಲಿಟಿ (Accountability, Responsibility, Answerbility) ಒಳಗೊಂಡ ಅಧಿಕಾರ ಪ್ರತ್ಯಾಯೋಜನೆಯನ್ನು ನಿಗದಿತ ಅವಧಿಯಲ್ಲಿ ಸಿದ್ದಪಡಿಸಿ ಅದರಂತೆ ಕೆಲಸ ನಿರ್ವಹಿಸುವಂತೆ ಮಾಡುವುದು ಅಗತ್ಯವಾಗಿರುತ್ತದೆ. ಹಾಗು ಪ್ರತ್ಯಾಯೋಜನೆಯನ್ನು ಜಾರಿ ಮಾಡುವ ಸಲುವಾಗಿ ಪೂಜ್ಯ ಮಹಾಪೌರರ ಅಥವಾ ಉಪ ಮಹಾಪೌರರ ಅಧ್ಯಕ್ಷತೆಯಲ್ಲಿ ಎಲ್ಲಾ ಪಕ್ಷದ ನಾಯಕರು, ಎಲ್ಲಾ ಸಮಿತಿಯ ಅಧ್ಯಕ್ಷರು ಮತ್ತು ಅಧಿಕಾರಿಗಳನ್ನೊಳಗೊಂಡ ಒಂದು ವಿಶೇಷ ಸಮಿತಿಯನ್ನು ರಚಿಸಿ ಕ್ರಮ ಜರುಗಿಸುವುದು.

ಈ ಮೇಲ್ಕಂಡ ನಿರ್ಣಯದ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲು ಮಹಾನಗರ ಪಾಲಿಕೆ ಸಭೆಗೆ ಮಂಡಿಸಲು ಸಮಿತಿಯು ತೀರ್ಮಾನಿಸಿತು.

ಅಧ್ಯಕ್ಷರು,
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

:ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಆಡಳಿತ ಪಕ್ಷ/ವಿರೋಧ ಪಕ್ಷ/ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.
:ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
:ಕೌನ್ಸಿಲ್ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
:ಎಲ್ಲಾ ವಲಯದ ಕಾರ್ಯಪಾಲಕ ಅಬಿಯಂತರರು( ಶಾಂತಿನಗರ-1 /ಭಾರತೀನಗರ /ಶಿವಾಜಿನಗರ/ಶಾಂತಿನಗರ/ಜಯಮಹಲ್/ವಿದ್ಯುತ್-ಪೂರ್ವ/ಪೂರ್ವ ವಿಭಾಗ/ಎಂ.ಪಿ.ಇ.ಡಿ-ಪೂರ್ವ/ವಿದ್ಯುತ್-ಕೇಂದ್ರ/ಮಹಾಲಕ್ಷ್ಮೀಪುರಂ/ಬಸವನಗುಡಿ/ಚಂದ್ರಾಲೇಔಟ್ /ಭಿನ್ನಿಪೇಟೆ/ ಬಸವನಗುಡಿ-2/ದಕ್ಷಿಣ ವಿಭಾಗ/ ವಿದ್ಯುತ್ ದಕ್ಷಿಣ/ ಎಂ.ಪಿ.ಇ.ಡಿ-ಪಶ್ಚಿಮ/ರಾಜಾಜಿನಗರ/ಮಲ್ಲೇಶ್ವರಂ/ವಿದ್ಯುತ್-ಪಶ್ಚಿಮ/ಚಾಮರಾಜಪೇಟೆ/ಉತ್ತರವಿಭಾಗ / ಗಾಂಧಿನಗರ/ಬೊಮ್ಮನಹಳ್ಳಿ/ಜಯನಗರ/ಬ್ಯಾಟರಾಯನಪುರ)ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.